# ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರ ಸಾಹಿತ್ಯ ಸೇವೆ

**ಸ್ವಾಮಿ ಮಂಗಳನಾಥಾನಂದ**

ದಿವ್ಯತ್ರಯರ ಹಾಗೂ ವೇದಾಂತವೇ ಮೊದಲಾದ ಶಾಸ್ತ್ರಗಳಿಗೆ ಸಂಬಂಧಪಟ್ಟಂತೆ ಮೇರುಕೃತಿಗಳನ್ನು ರಚಿಸಿರುವ ಪೂಜ್ಯ ಸ್ವಾಮಿ ಹರ್ಷಾನಂದಜಿಯವರು ರಾಮಕೃಷ್ಣ ಭಾವಧಾರೆಗೆ ತಮ್ಮ ಸಾಹಿತ್ಯರಚನೆಗಳ ಮೂಲಕ ಅಪಾರ ಸೇವೆ ಸಲ್ಲಿಸಿದ್ದಾರೆ. ಪೂಜ್ಯ ಸ್ವಾಮೀಜಿಯವರ ಸಾಹಿತ್ಯಸೇವೆಯನ್ನು ಕುರಿತು ಬರೆದಿರುವ ಲೇಖಕರು ತುರುವೇಕರೆ ಬಳಿ ಇರುವ ಮಾದಿಹಳ್ಳಿ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಭಾಷಣಕಾರರೂ, ಬರಹಗಾರರೂ ಆಗಿರುವ ಅವರ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.



ಸ್ವಾಮಿ ಹರ್ಷಾನಂದಜಿಯವರು ರಾಮಕೃಷ್ಣ ಮಠ ಮತ್ತು ಮಿಷನ್‌ನ್ನಿನ ಹಿರಿಯ ಸಾಧುಗಳಲ್ಲಿ ಒಬ್ಬರಾಗಿದ್ದರು. ಬಹುಮುಖ ಪ್ರತಿಭೆಯ ಸ್ವಾಮೀಜಿಯವರು, ಉತ್ತಮ ಹಾಡುಗಾರರೂ, ಬರಹಗಾರರೂ ಮತ್ತು ಉಪನ್ಯಾಸಕರೂ ಕೂಡ. ತಮ್ಮ ಬೌದ್ಧಿಕ ಹಾಗೂ ಹೃದಯವಂತಿಕೆಯ ನಡವಳಿಕೆಯಿಂದ ಎಲ್ಲರ ಮನಸ್ಸನ್ನು ಸೂರೆಗೊಂಡಿದ್ದರು. ಅವರು ತಮ್ಮ ಕಾಲೇಜ್ ವಿದ್ಯಾಭ್ಯಾಸದ ಸಮಯದಲ್ಲಿಯೇ ಸ್ವಾಮಿ ತ್ಯಾಗೀಶಾನಂದಜಿ ಮಹಾರಾಜರ (ಸ್ವಾಮಿ ಬ್ರಹ್ಮಾನಂದರ ಶಿಷ್ಯರು) ಸಂಪರ್ಕಕ್ಕೆ ಬಂದು ಅವರ ಮಾರ್ಗದರ್ಶನದಿಂದ ಬೇಲೂರು ಮಠಕ್ಕೆ ಹೋಗಿ ಪೂಜ್ಯ ಸ್ವಾಮಿ ವಿರಜಾನಂದಜಿ ಮಹಾರಾಜರಿಂದ ಮಂತ್ರದೀಕ್ಷೆ ಪಡೆದರು. ಸ್ವಾಮಿ ಹರ್ಷಾನಂದರೇ ಒಮ್ಮೆ ತಿಳಿಸಿದಂತೆ ಮಂತ್ರದೀಕ್ಷೆ ಪಡೆದನಂತರ, ಸ್ವಾಮಿ ವಿರಜಾನಂದಜಿ ಮಹಾರಾಜರು ತಮ್ಮ ಎರಡೂ ಕೈಗಳನ್ನು ಇವರ ತಲೆಯ ಮೇಲೆ ಇಟ್ಟು ಆಶೀರ್ವದಿಸಿದರು. ಇದರ ಪರಿಣಾಮ ಸುಮಾರು ಆರು ತಿಂಗಳ ಕಾಲ ಇವರು, ಒಂದು ರೀತಿಯ ನಿರಂತರ ಆನಂದ ಹಾಗೂ ಶಾಂತಿಯ ಅನುಭವದಲ್ಲಿದ್ದರು. ಬಾಹ್ಯದ ಯಾವ ರೀತಿಯ ಕೆಲಸ-ಕಾರ್ಯಗಳಿಂದಲೂ ಈ ಆನಂದ-ಶಾಂತಿಯ ಅನುಭವಕ್ಕೆ ಭಂಗವಾಗಲಿಲ್ಲ! ನಂತರ ಅವರು ತಮ್ಮ ಆಶ್ರಮ ಜೀವನವನ್ನು ಆರಂಭಿಸಿದಾಗ ಸ್ವಾಮಿ ಯತೀಶ್ವರಾನಂದಜಿ ಮಹಾರಾಜರ ದಿವ್ಯ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಜೀವನವನ್ನು ರೂಪಿಸಿಕೊಂಡರು.

ಸ್ವಾಮಿ ಹರ್ಷಾನಂದಜಿಯವರ ಸಾಹಿತ್ಯ ಸೇವೆಗೆ ಒಂದು ರೀತಿಯಲ್ಲಿ ಸ್ವಾಮಿ ಯತೀಶ್ವರಾನಂದಜಿಯವರೇ ಪ್ರೇರಣೆ. ಸ್ವಾಮಿ ಹರ್ಷಾನಂದಜಿ ಮಹಾರಾಜರು ಎಂಜಿನಿಯರಿಂಗ್‌ನಲ್ಲಿ ಚಿನ್ನದ ಪದಕ ಪಡೆದ ನಂತರ, ಆಶ್ರಮವನ್ನು ಸೇರಲು ನಿರ್ಧರಿಸಿದರು. ಆಗಲೇ ಅವರು ಸಾಕಷ್ಟು ಸಾಹಿತ್ಯ ಹಾಗೂ ಶೈಕ್ಷಣಿಕ ಪುಸ್ತಕಗಳನ್ನು ಇಷ್ಟಪಟ್ಟು-ಕಷ್ಟಪಟ್ಟು ಅಧ್ಯಯನ ಮಾಡಿದ್ದರು. ಅವರು ಬಸವನಗುಡಿ ರಾಮಕೃಷ್ಣ ಮಠದ ದ್ವಾರ ಪ್ರವೇಶಿಸಿದಾಗ (ಆಶ್ರಮ ಸೇರಲು ಬಂದ ದಿನ) ಅವರಿಗೆ ಒಂದು ಆಲೋಚನೆ ಬಂದು ಹೀಗೆ ನಿರ್ಧರಿಸಿದರಂತೆ, ಇಷ್ಟು ದಿವಸ ಸಾಕಷ್ಟು ಓದಿದ್ದಾಯಿತು, ಇನ್ನು ಮುಂದೆ ಆಶ್ರಮದಲ್ಲಿ ಕೇವಲ ಸೇವಾಕೈಂಕರ್ಯವನ್ನು ಮಾಡುವುದು ಮತ್ತು ಮಿಕ್ಕ ಸಮಯದಲ್ಲಿ ಪ್ರಾರ್ಥನೆ, ಜಪ, ಧ್ಯಾನ, ಪಾರಾಯಣ ಇಷ್ಟು ಮಾತ್ರ ಮಾಡುವುದು, No more studies & writing ಅಂತ. ಇದು, ಇವರು ತಮ್ಮ ಮನಸ್ಸಿನಲ್ಲಿ ತಾವೇ ತೀರ್ಮಾನಿಸಿದ್ದು, ಆದರೆ ಯಾವಾಗ ಸ್ವಾಮಿ ಯತೀಶ್ವರಾನಂದರ ಬಳಿಗೆ ಪ್ರಣಾಮ ಮಾಡಲು ಬಂದರೋ, ಆಗ ಮಹಾರಾಜ್ ಹೇಳಿದರಂತೆ, ''ಎಂದಿಗೂ ನೀನು ನಿನ್ನ ಅಧ್ಯಯನ ಮತ್ತು ಬರವಣಿಗೆಯನ್ನು ನಿಲ್ಲಿಸಬೇಡ'' ಎಂದು. ಆಗ ಅವರಿಗೆ ಸ್ವಲ್ಪ ಬೇಸರವಾದರೂ ಮುಂದೆ ಈ ಘಟನೆ ನೆನಪು ಮಾಡಿಕೊಂಡು, ಹೇಳುತ್ತಿದ್ದರು, ''ಸ್ವಾಮಿ ಯತೀಶ್ವರಾನಂದರೇ ಹೇಳದಿದ್ದರೆ ಇದನ್ನೆಲ್ಲ ಬರೆಯಲಾಗುತ್ತಿರಲಿಲ್ಲ ನನ್ನಿಂದ. He used to read our minds'' ಅಂತ.

ಸ್ವಾಮಿ ಹರ್ಷಾನಂದಜಿಯವರ ಸಾಹಿತ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ೧. ಅವರು ಬರೆದ ಪುಸ್ತಕಗಳು, ೨. ಅವರು ಬರೆದ ಲೇಖನಗಳು ಹಾಗೂ ೩. ಅವರು ರಚನೆ ಮಾಡಿದ

ಹಾಡು ಮತ್ತು ಸ್ತೋತ್ರಗಳು. ಇವುಗಳಲ್ಲಿ ಕೇವಲ ಮುಖ್ಯವಾಗಿ ಕೆಲವು ಪ್ರಮುಖವಾದ ಪುಸ್ತಕ ಹಾಗೂ ಸ್ತೋತ್ರಗಳ ವಿಚಾರ ಮಾತ್ರ ಪ್ರಸ್ತಾಪಿಸುತ್ತೇನೆ. ಸ್ವಾಮೀಜಿಯವರು ತಮ್ಮ ಗ್ರಂಥಗಳನ್ನು ಕನ್ನಡ, ಆಂಗ್ಲ ಹಾಗೂ ಸಂಸ್ಕೃತ ಭಾಷೆಗಳಲ್ಲಿ ರಚಿಸಿದ್ದಾರೆ.


ನಾನು ಒಮ್ಮೆ ಒಬ್ಬ ಹಿರಿಯ ಸಾಧುಗಳ ಪಾಂಡಿತ್ಯದಿಂದ ಕೂಡಿದ ಪುಸ್ತಕಗಳ ಬಗ್ಗೆ ಹೊಗಳಿ ಮಾತನಾಡುತ್ತಿದ್ದೆ. ಅದಕ್ಕೆ ಸ್ವಾಮೀಜಿಯವರು ಹೇಳಿದರು, ''ಪಾಂಡಿತ್ಯವೇನೋ ಸರಿಯೆ, ಆದರೆ ಪುಸ್ತಕ ಬರೆಯುವಾಗ ಸಾಮಾನ್ಯ ಜನರನ್ನು ಮನದಲ್ಲಿಟ್ಟು ಕೊಂಡು ಬರೆಯಬೇಕು. ಎಷ್ಟು ಜನ ಈ ಪಾಂಡಿತ್ಯ ಉಳ್ಳವರಾಗಿದ್ದಾರೆ? ಅದರಲ್ಲೂ ಸನಾತನ ಶಾಸ್ತ್ರದ ಕುರಿತು! ಹಾಗಾಗಿ ಬರವಣಿಗೆ ಸರಳವಾಗಿರಬೇಕು'' ಎಂದು. ಅವರ ಪುಸ್ತಕಗಳು ತುಂಬಾ ಸರಳ, ಸ್ಪಷ್ಟ, ಚೊಕ್ಕ, ಅಸಂದಿಗ್ಧ ಮತ್ತು ವಿಚಾರಯುಕ್ತ. ಅವರ ಕೆಲವು ಪುಸ್ತಕಗಳು ಫ್ರೆಂಚ್, ಕೊರಿಯನ್, ಮತ್ತು ಇಂಡೋನೇಷ್ಯನ್ ಭಾಷೆಗಳಿಗೆ ಕೂಡ ತರ್ಜುಮೆಗೊಂಡಿದೆ.

ಅವರ ಬರವಣಿಗೆಯ ಶೈಲಿಯ ಬಗ್ಗೆ ಹೇಳುವುದಾದರೆ ಅವರ ಕನ್ನಡ ಮತ್ತು ಇಂಗ್ಲಿಷ್ ಬರಹ ತುಂಬಾ ಅಚ್ಚುಕಟ್ಟು ಹಾಗೂ ಬರವಣಿಗೆಯಲ್ಲಿ ಎಲ್ಲಿಯೂ ಸ್ವಲ್ಪವೂ ಚಿತ್ತಿರುತ್ತಿರಲಿಲ್ಲ. ಬಹುಶಃ ಬರೆದ ಹಾಳೆಗಳನ್ನೇ ನೇರವಾಗಿ ಬೈಂಡ್ ಮಾಡಿಸಿ ಪುಸ್ತಕ ಮಾಡಿಬಿಡಬಹುದಾಗಿತ್ತು. ಅವರ ಉಪನ್ಯಾಸಗಳ ಟಿಪ್ಪಣಿ ಕೂಡ ಹಾಗೆಯೆ ಕ್ರಮಬದ್ಧ ಮತ್ತು ಲೇಖನದ ಶೈಲಿ ಕೂಡ ಅರ್ಥಗರ್ಭಿತ ಹಾಗೂ ಹಾಸ್ಯ ಮಿಶ್ರಿತ.

## ಆಂಗ್ಲ ಭಾಷೆಯಲ್ಲಿ ರಚಿಸಿದ ಗ್ರಂಥಗಳು

### ೧) ಹಿಂದೂಧರ್ಮದ ಸಂಕ್ಷಿಪ್ತ ವಿಶ್ವಕೋಶ

ಬಾಲ್ಯದಿಂದಲೇ ಅವರಿಗೆ ಹಿಂದೂಧರ್ಮದ ಬಗ್ಗೆ ವಿಶೇಷವಾದ ಹೆಮ್ಮೆ ಹಾಗೂ ಪ್ರೀತಿ. ಆದ್ದರಿಂದ ಹಿಂದೂಧರ್ಮದ ಬಗ್ಗೆ ತಿಳಿದುಕೊಳ್ಳಲು ಅವರಿಗೆ ಹೆಚ್ಚಿನ ಕಾಳಜಿ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಓದಲು ಪ್ರಾರಂಭಿಸಿದರು. ಆದರೆ ಅವರಿಗೆ ಕಷ್ಟವಾದದ್ದು ಏನು ಎಂದರೆ ಒಂದೇ ಕಡೆ ಎಲ್ಲ ವಿಷಯಗಳನ್ನು ಸುಲಭವಾಗಿ ತಿಳಿಯಲು ಸಾಧ್ಯವಿಲ್ಲ. ಹಲವು ಪುಸ್ತಕಗಳನ್ನು ಓದಬೇಕು. ಓದಿದ ಮೇಲೂ ಸ್ಪಷ್ಟವಾಗಿ ಸಾರಾಂಶ ತಿಳಿಯಲು ಸಾಧ್ಯವಿಲ್ಲ. ಈಗಿನ ಕಾಲದಂತೆ ಮಾಹಿತಿಗಾಗಿ ಗೂಗಲ್ ನೆರವು ಪಡೆಯುವ ಸೌಲಭ್ಯವಿರದ ಕಾಲವದು. ಅವರು ಪುಸ್ತಕಗಳಿಗಾಗಿ ಎಷ್ಟು ಗ್ರಂಥಾಲಯವನ್ನು ಭೇಟಿಕೊಟ್ಟಿದ್ದಾರೆ! Oriental Research Institute ಸಂಪರ್ಕಿಸಿದ್ದಾರೆ. ಹಿಂದೂಧರ್ಮದ ವಿಶ್ವಕೋಶದ ರಚನೆಯ ಸಲುವಾಗಿ ಅತ್ಯಂತ ಅಪರೂಪದ ಗ್ರಂಥಗಳು ಸುಲಭವಾಗಿ ಸಿಗದಾದಾಗ, ಬಹಳ ಪರಿಶ್ರಮಪಟ್ಟು ತಾವೇ ಅವನ್ನು ಸಂಪಾದಿಸಿ ತಮ್ಮದೇ ಆದ ಸ್ವಂತ ಗ್ರಂಥಾಲಯವನ್ನು ನಿರ್ಮಾಣ ಮಾಡಿಕೊಂಡರು! ಇಷ್ಟೆಲ್ಲಾ ಪರಿಶ್ರಮವನ್ನು ಅವರು ತೆಗೆದುಕೊಂಡದ್ದಕ್ಕಾಗಿಯೇ 'ಹಿಂದೂಧರ್ಮದ ಸಂಕ್ಷಿಪ್ತ ವಿಶ್ವಕೋಶ'ವು ಹೊರಬರಲು ಸಾಧ್ಯವಾದದ್ದು. ಸಾಧಾರಣವಾಗಿ ವಿಶ್ವಕೋಶವನ್ನು ಬರೆಯುವಾಗ ಒಬ್ಬ ಮುಖ್ಯ ಸಂಪಾದಕರು ಮತ್ತು ಹಲವು




ಲೇಖಕರು ಸೇರಿ ಬರೆಯುತ್ತಾರೆ. ಇದು ಒಂದು ಸಮಿತಿ-ಸಂಘಟನೆ ಕೈಗೊಳ್ಳುವ ಕಾರ್ಯ. ಆದರೆ ಈ ಹಿಂದೂ ವಿಶ್ವಕೋಶವು ಸ್ವಾಮೀಜಿಯವರು ಒಬ್ಬರೇ ಸಂಕಲಿಸಿದ ಕೃತಿ. ಇದಕ್ಕೆ ಪರಿವಿಡಿಯನ್ನೂ ಅವರೇ ಸ್ವತಃ ತಯಾರಿಸಿದರು. ಬಹಳ ಮುಖ್ಯವಾದ ಹಾಗೂ ಮಹತ್ತರವಾದ ವಿಷಯವೇನೆಂದರೆ ಅವರ ಎಲ್ಲಾ ಬರವಣಿಗೆ ಯಾವ ಯಂತ್ರವನ್ನೂ ಬಳಸದೇ (Computer, Typewriter) ಸ್ವತಃ ತಾವೇ ಬರೆಯುತ್ತಿದ್ದರು. ತದನಂತರ ಅದನ್ನು ಟೈಪ್ ಮಾಡಲಾಗುತ್ತಿತ್ತು. ಯಾವ Cut, copy paste ಗೂ ಅವಕಾಶವಿಲ್ಲ!! ವಿಶ್ವಕೋಶವನ್ನು ಅವರು ಬರೆಯಲು ಪ್ರಾರಂಭಿಸಿದ್ದು ೧೯೭೫ ರಲ್ಲಿ. ಇದರ ಮೊದಲ ಆವೃತ್ತಿ ಹೊರಬಂದದ್ದು ೨೦೦೮ರಲ್ಲಿ! ಮೂವತ್ತ ಮೂರು ವರ್ಷಗಳ ಸಾಧನೆಯ ಫಲ!! ಸುಮಾರು ೨೦೦೦ಕ್ಕೂ ಹೆಚ್ಚು ಪುಟಗಳು, ಮೂರು ಸಂಪುಟಗಳಲ್ಲಿ. ಆರು ವರ್ಷಗಳ ನಂತರ ೨೦೧೪ರಲ್ಲಿ ಇನ್ನೂ ಕೆಲವು ಮಾಹಿತಿಗಳನ್ನು ಸೇರಿಸಿ ೧೭೦ಕ್ಕೂ ಹೆಚ್ಚು ಪುಟಗಳುಳ್ಳ ಅನುಬಂಧವನ್ನೂ ಪ್ರಕಟಿಸಲಾಯಿತು. ಪ್ರಕಟಣೆಯಾದ ಕೆಲವೇ ತಿಂಗಳಲ್ಲಿ ಮೊದಲ ಮುದ್ರಣದ ೮೦೦೦ ಪ್ರತಿಗಳೂ ಮಾರಾಟವಾದವು.

### ೨) ನಾಮ ರಾಮಾಯಣ ಮಹಿಮಾ

ಪ್ರತಿ ಏಕಾದಶಿಯಂದು ನಮ್ಮ ಎಲ್ಲ ರಾಮಕೃಷ್ಣ ಮಠಗಳಲ್ಲಿ ರಾಮನಾಮ ಸಂಕೀರ್ತನೆ ಹಾಡುವುದು ಒಂದು ಸಂಪ್ರದಾಯವಾಗಿದೆ. ಸ್ವಾಮಿ ಬ್ರಹ್ಮಾನಂದರು ಈ ಸಂಪ್ರದಾಯವನ್ನು ಪ್ರಾರಂಭ ಮಾಡಿದ್ದರು. ಇದರಲ್ಲಿ ಮುಖ್ಯವಾಗಿ 'ಶುದ್ಧಬ್ರಹ್ಮ ಪರಾತ್ಪರ ರಾಮ' ಕೇವಲ ೧೦೮ ಸಾಲಿನ ರಚನೆ. ಇದು ೨೪,೦೦೦ ಶ್ಲೋಕಗಳ ಇಡೀ ರಾಮಾಯಣದ ಸಾರವನ್ನೇ ಒಳಗೊಂಡಿದೆ.

ಸ್ವಾಮೀಜಿಯವರು ೧೯೯೦ರಲ್ಲಿ ಸುಮಾರು ೧೫೦ ಉಪನ್ಯಾಸ ಮಾಲಿಕೆಯಲ್ಲಿ ವಾಲ್ಮೀಕಿ ರಾಮಾಯಣ, ಅಧ್ಯಾತ್ಮ ರಾಮಾಯಣ, ಆನಂದ ರಾಮಾಯಣ ಮತ್ತು ರಾಮಚರಿತ ಮಾನಸದ ಸಹಾಯದಿಂದ ರಾಮಾಯಣದ ಕುರಿತಾಗಿ ಉಪನ್ಯಾಸ ನೀಡಿದ್ದರು.

ಮೊದಲು ಇದರ ಧ್ವನಿಮುದ್ರಣವನ್ನು ಪ್ರಕಟಿಸಲಾಯಿತು. ಈ ಧ್ವನಿ ಮುದ್ರಣವನ್ನು ಆಲಿಸಿದ ಡಾ.ಕೃಷ್ಣಮೂರ್ತಿ ರಾಮಕೃಷ್ಣ (USA) ಆಂಗ್ಲಭಾಷೆಗೆ ತರ್ಜುಮೆ ಮಾಡಿ, ಲೇಖನ ರೂಪದಲ್ಲಿ ಬರೆದು ಅದನ್ನು ಸ್ವಾಮೀಜಿಯವರಿಗೆ ತಲುಪಿಸಿದರು. ೨೦೨೦ರಲ್ಲಿ ಈ ಲೇಖನವನ್ನು ಕೆಲವು ತಿದ್ದುಪಡಿ ಮಾಡಿ, ಸ್ವಾಮೀಜಿಯವರು ಅದನ್ನು ಮೂರು ಸಂಪುಟಗಳ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಸುಮಾರು ೧೮೦೦ ಪುಟಗಳಲ್ಲಿ ೧೦೮ ಸಾಲಿನ ರಾಮನಾಮ ಸಂಕೀರ್ತನೆಯ ಪೂರ್ಣ ವಿವರ ನಮಗೆ ಈ ಪುಸ್ತಕದಲ್ಲಿ ದೊರಕುತ್ತದೆ.

## ಕನ್ನಡದಲ್ಲಿ ಪ್ರಕಟಿಸಿದ ಗ್ರಂಥಗಳು

### ೧) ಶ್ರೀ ಶ್ರೀ ರಾಮಕೃಷ್ಣ ಭಾಗವತಮ್

ಈ ಗ್ರಂಥ ಸ್ವಾಮೀಜಿಯವರ ನೇರವಾದ ಕೊಡುಗೆ ಅಲ್ಲ. ಶ್ರೀ ರಾಮಕೃಷ್ಣರಿಂದ ಸ್ವಪ್ನದಲ್ಲಿ ಆದೇಶವನ್ನು ಪಡೆದ ಸುಮಾರು ೮೦ ವರ್ಷದ ಶ್ರೀರಾಮೇಂದ್ರ ಸುಂದರ ಭಟ್ಟಾಚಾರ್ಯರು, ಸುಮಾರು ೩೦೬೪ ಶ್ಲೋಕಗಳುಳ್ಳ ಈ ಗ್ರಂಥವನ್ನು ಮೊದಲಿಗೆ ಸಂಸ್ಕೃತದಲ್ಲಿ ರಚಿಸಿದರು. ನಂತರ ಸ್ವಾಮೀಜಿಯವರು, ಡಾ. ಆರೂಢ ಭಾರತಿಯವರಿಂದ ಕನ್ನಡಕ್ಕೆ ಅನುವಾದ ಮಾಡಿಸಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪೂರ್ವ ಕೊಡುಗೆಯನ್ನು ನೀಡಿದರು. ಈ ಸಂಸ್ಕೃತ ಗ್ರಂಥ ಕನ್ನಡದಲ್ಲಿ ಮೊದಲ ಮುದ್ರಣ ಕಂಡದ್ದು ೨೦೧೮ರಲ್ಲಿ! ಆದರೆ ಸ್ವಾಮೀಜಿಯವರು ಈ ಪುಸ್ತಕವನ್ನು ೧೯೬೪ರಲ್ಲಿ ಮೊದಲ ಬಾರಿಗೆ ಓದಿದ್ದರು. ಓದಿದ ನಂತರ ಇದನ್ನು ಕನ್ನಡಕ್ಕೆ ಅನುವಾದ ಮಾಡಿಸಬೇಕು ಎಂಬ ಇಚ್ಛೆ ಅವರಲ್ಲಿ ಜಾಗೃತವಾಯಿತು. ಈ ಇಚ್ಛೆ ಪೂರ್ಣವಾಗಲು ೫೪ ವರ್ಷ ಬೇಕಾಯಿತು. ಈ ಪುಸ್ತಕದ ವಿಶೇಷತೆ ಮತ್ತು ಲೇಖಕರ ವಿಚಾರವಾಗಿ ಮಾರ್ಚ್ ೨೦೧೦ ರ 'ವಿವೇಕಪ್ರಭ' ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಗ್ರಂಥದಲ್ಲಿ ಕೆಲವು ಹೊಸದಾದ ಅದೂ 'ಶ್ರೀ ರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಕಾಣದ ಘಟನೆಗಳನ್ನು ನಾವು ನೋಡಬಹುದು. ಸ್ವಯಂ ಶ್ರೀರಾಮಕೃಷ್ಣರೇ ರಾಮೇಂದ್ರ ಸುಂದರರಿಗೆ ಸ್ವಪ್ನದಲ್ಲಿ ಉಚ್ಚರಿಸಿದ ಶ್ಲೋಕವೊಂದು ಹೀಗಿದೆ:

**ಮಲ್ಲೀಲಾಂ ವಿಲಿಖ ತ್ವಂ ಭೋ**
**ದೇವಭಾಷಾಯುತಾಂ ಸುಧೀಃ ।**
**ತ್ವಾಮಹಂ ಸಂವದಿಷ್ಯಾಮಿ**
**ಮಾ ಭೈಷೀಃ ಪಂಡಿತೋ ಭವಾನ್ ॥**

'ಎಲೈ ಪಂಡಿತನೆ, ನನ್ನ ಲೀಲೆಯನ್ನು ನೀನು ಸಂಸ್ಕೃತದಲ್ಲಿ ರಚಿಸು. ನಿನ್ನೊಂದಿಗೆ ನಾನು (ಆಗಾಗ) ಸಂಭಾಷಣೆ ನಡೆಸುತ್ತೇನೆ. (ಮತ್ತು ನಿನ್ನ ಸಂದೇಹಗಳನ್ನು ನಿವಾರಿಸುತ್ತೇನೆ) ಹೆದರದಿರು. ನೀನೊಬ್ಬ ಪಂಡಿತ (ಅರ್ಥಾತ್, ನಿನ್ನಿಂದ ಈ ಕೆಲಸ ಸಾಧ್ಯ).'

ಇಂತಹ 'ಶ್ರೀ ಶ್ರೀ ರಾಮಕೃಷ್ಣಭಾಗವತಮ್' ಅನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದ ಹಿರಿಮೆ ಸ್ವಾಮೀಜಿಯವರಿಗೆ ಸಲ್ಲುತ್ತದೆ.

ಇಷ್ಟೇ ಅಲ್ಲದೆ ಯೋಗ, ವೇದಾಂತ ಸಾಹಿತ್ಯಕ್ಕೆ ಕೊಡುಗೆಯಾಗಿ ಜೀವನ್ಮುಕ್ತಿ ವಿವೇಕ, ಶಾಂತಿಮಂತ್ರಗಳು, ಆತ್ಮಬೋಧ, ಅಪರೋಕ್ಷಾನುಭೂತಿ, ವಾಕ್ಯವೃತ್ತಿ, ಲಘುವಾಕ್ಯವೃತ್ತಿ, ಈಶಾವಾಸ್ಯೋಪನಿಷತ್, ಹೀಗೆ ಹಲವು ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಿದ್ದಾರೆ.

## ಸಂಸ್ಕೃತದಲ್ಲಿ ರಚಿಸಿದ ಗ್ರಂಥಗಳು

ಶ್ರೀ ಶೃಂಗೇರಿ ಶಾರದಾಪೀಠದ ಮಹಾಸನ್ನಿಧಾನ ಶ್ರೀ ಶ್ರೀ ಭಾರತೀ ತೀರ್ಥರು ಒಮ್ಮೆ ಸ್ವಾಮಿ ಹರ್ಷಾನಂದರಿಗೆ ಹೇಳಿದ್ದರು: ''ರಾಮಕೃಷ್ಣ ಮಿಶನ್‌ನಲ್ಲಿ ಆಂಗ್ಲ ಭಾಷೆಯಲ್ಲಿ, ಕನ್ನಡ ಭಾಷೆಯಲ್ಲಿ ಹಲವರು ಪುಸ್ತಕ ಬರೆದಿದ್ದಾರೆ. ಆದರೆ ಸಂಸ್ಕೃತದಲ್ಲಿ ಬರೆದವರು ನೀವೊಬ್ಬರೇ ಅಂದುಕೊಳ್ಳುತ್ತೇನೆ'' ಎಂದು.

ಸ್ವಾರಸ್ಯವೆಂದರೆ ಸ್ವಾಮೀಜಿಯವರು ತಮ್ಮ ಕಾಲೇಜಿನ ವಿದ್ಯಾಭ್ಯಾಸದಲ್ಲಿ ಸಂಸ್ಕೃತ ಕಲಿತವರಲ್ಲ. ಆಶ್ರಮಕ್ಕೆ ಸೇರಿದ ಮೇಲೆ ಕಲಿಯಲು ಪ್ರಾರಂಭಿಸಿದ್ದು. ಅದೂ ಸಿದ್ಧಾಂತ ಕೌಮುದಿ ಇತ್ಯಾದಿ ವ್ಯಾಕರಣ ಗ್ರಂಥಗಳನ್ನು ಓದಲಿಲ್ಲ. ಆದರೆ ಸಂಸ್ಕೃತ ಬರವಣಿಗೆಯನ್ನು ಅದ್ಭುತವಾಗಿ ಕರಗತಗಳಿಸಿಕೊಂಡರು. ಅವರು ಬರೆದ ಕೆಲವು ಮುಖ್ಯವಾದ ಪುಸ್ತಕಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ :

೧. ವಿವೇಕಾನಂದ-ಕರ್ಮಯೋಗ-ಸೂತ್ರಶತಕಮ್
೨. ಸಾಧನಾ ಸೂತ್ರಾಣಿ
೩. ಅಷ್ಟ ಸೂತ್ರೀ
೪. ವಿವೇಕ ಸೌರಭಮ್
೫. ವಿವೇಕ-ಸುಖವರ್ಧಿನೀ ವ್ಯಾಖ್ಯಾನಸಹಿತಾ ಈಶಾವಾಸ್ಯೋಪನಿಷತ್
೬. ಅರ್ಥಪ್ರಕಾಶಿನೀ ವ್ಯಾಖ್ಯಾನಸಹಿತಃ ಆತ್ಮಬೋಧಃ

ಇವುಗಳಲ್ಲಿ ಮೂರು ಗ್ರಂಥಗಳ ವಿಶೇಷತೆಯನ್ನು ಇಲ್ಲಿ ವರ್ಣಿಸಲು ಇಚ್ಛಿಸುತ್ತೇನೆ:

### ೧. ವಿವೇಕಾನಂದ ಕರ್ಮಯೋಗ ಸೂತ್ರಶತಕಮ್

ನಮ್ಮ ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಮುಖ್ಯ ವಾಗಿ ನಾಲ್ಕು ಸಾಧನಾಪಥಗಳನ್ನು ಹೇಳಲಾಗಿದೆ. ಅವುಗಳು ಜ್ಞಾನಯೋಗ, ಭಕ್ತಿಯೋಗ, ರಾಜಯೋಗ ಮತ್ತು ಕರ್ಮಯೋಗ. ಪ್ರತಿಯೊಂದು ಯೋಗಕ್ಕೂ ಒಂದೊಂದು ಆಧಾರ ಶಾಸ್ತ್ರಗ್ರಂಥಗಳಿವೆ. ಕರ್ಮಯೋಗವನ್ನು ಬಿಟ್ಟು, ಜ್ಞಾನಯೋಗಕ್ಕೆ ಬ್ರಹ್ಮಸೂತ್ರಗಳು, ಭಕ್ತಿಯೋಗಕ್ಕೆ ನಾರದೀಯ ಭಕ್ತಿಸೂತ್ರಗಳು ಹಾಗೂ ಶಾಂಡಿಲ್ಯ ಭಕ್ತಿಸೂತ್ರಗಳು, ರಾಜಯೋಗಕ್ಕೆ ಪತಂಜಲಿಯ ಯೋಗಸೂತ್ರಗಳು. ಆದರೆ ಕರ್ಮಯೋಗಕ್ಕೆ ಈ ರೀತಿಯಾಗಿ ಸೂತ್ರಗಳು ಲಭ್ಯವಿಲ್ಲ. ಭಗವದ್ಗೀತೆಯಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿ ಕರ್ಮಯೋಗದ ವರ್ಣನೆ ಇದೆ. ಆದರೆ ಕ್ರಮಬದ್ಧವಾಗಿ, ಹಂತ ಹಂತವಾಗಿ ಸಾಧನಾರೂಪದ ಸೂತ್ರರೂಪಿ ಶಾಸ್ತ್ರಗ್ರಂಥವಿಲ್ಲ. ಆದ್ದರಿಂದ ಸ್ವಾಮೀಜಿಯವರು ಸ್ವಾಮಿ ವಿವೇಕಾನಂದರ ಕರ್ಮಯೋಗದ ಆಧಾರದ ಮೇಲೆ ೧೦೧ ಸೂತ್ರಗಳನ್ನು ಮೂರು ಅಧ್ಯಾಯಗಳಲ್ಲಿ ರಚಿಸಿದ್ದಾರೆ. ಈ ಸೂತ್ರಗಳಿಗೆ ಸಂಸ್ಕೃತದಲ್ಲಿ ತಾವೇ ಭಾಷ್ಯವನ್ನೂ ಬರೆದಿದ್ದಾರೆ. ಇದುವರೆಗೂ ಯಾರೂ ಕೂಡ ಕರ್ಮಯೋಗಕ್ಕೆ ಸೂತ್ರವನ್ನು ಬರೆದವರೇ ಇಲ್ಲ. ಇವರೇ ಪ್ರಪ್ರಥಮರು.

ಈ ಕರ್ಮಯೋಗದ ಸೂತ್ರ ರಚನೆ ಮಾಡಬೇಕು ಎಂದು ನಿರ್ಧಾರ ಮಾಡಿದಾಗ, ಅವರು ೪೮ ದಿವಸದ ವ್ರತ ಕೈಗೊಂಡರು. ಈ ೪೮ ದಿವಸ ನಾನು ಹೀಗೆ ಹೀಗೆ ಇರುತ್ತೇನೆ, ಆಹಾರ, ವಿಹಾರ, ಶಯನ ಇತ್ಯಾದಿಗಳಲ್ಲಿ ತಪಸ್ಸಿನಂತೆ ವ್ರತದ ಸಂಕಲ್ಪ ಮಾಡಿದರು. ಅವರೇ ಹೇಳುತ್ತಿದ್ದರು: ಅವರಿಗೆ ಈ ಸೂತ್ರಗಳು ತಾವಾಗಿ ಒಳಗಿನಿಂದ ಮೂಡಿಬಂದವು. ಹಾಗೂ ಮಲಗಿದ್ದಾಗ ನಿದ್ರೆಯಲ್ಲೂ ಸೂತ್ರಗಳು ಬುದ್ಧಿಗೆ ಗೋಚರಿಸುತ್ತಿದ್ದವು. ಆಗ ತಕ್ಷಣ ಎದ್ದು ಬರೆದುಕೊಳ್ಳುತ್ತಿದ್ದರಂತೆ!

ಹೀಗೆ ಅವರು ಇತಿಹಾಸದಲ್ಲಿ ಪ್ರಪ್ರಥಮ ಕರ್ಮಯೋಗದ ಸೂತ್ರಕಾರರಾದರು!

### ೨. ವಿವೇಕಸುಖವರ್ಧಿನೀ ವ್ಯಾಖ್ಯಾನಸಹಿತಾ ಈಶಾವಾಸ್ಯೋಪನಿಷತ್

ಸ್ವಾಮಿ ವಿವೇಕಾನಂದರ ಕರ್ಮಯೋಗದ ಮೇಲೆ ಶತಸೂತ್ರಗಳನ್ನು ರಚಿಸಿದ ಮೇಲೆ ಒಬ್ಬರು ಹಿರಿಯ ಸಾಧುಗಳು ಸ್ವಾಮೀಜಿಯವರಿಗೆ ಸಲಹೆ ಇತ್ತರು – ನೀವು ಏಕೆ ಸ್ವಾಮಿ ವಿವೇಕಾನಂದರ 'God in Everything' ಉಪನ್ಯಾಸವನ್ನು ಆಧಾರವಾಗಿ ಇಟ್ಟುಕೊಂಡು ಒಂದು ವ್ಯಾಖ್ಯಾನವನ್ನು ಬರೆಯಬಾರದು? ಎಂದು. ''God in Everything'' ಉಪನ್ಯಾಸವು ಸ್ವಾಮಿ ವಿವೇಕಾನಂದರ ಜ್ಞಾನಯೋಗ ಉಪನ್ಯಾಸ ಮಾಲಿಕೆಯಲ್ಲಿ ಲಭ್ಯವಿದೆ. ಈ ಉಪನ್ಯಾಸವು ಈಶಾವಾಸ್ಯ ಉಪನಿಷತ್ತಿನ ವರ್ಣನೆ. ಈ ಉಪನ್ಯಾಸವನ್ನು ಆಧರಿಸಿದ ಈಶಾವಾಸ್ಯ ಉಪನಿಷತ್ತಿನ ಸ್ವಾಮೀಜಿಯವರ ವ್ಯಾಖ್ಯೆಯೇ **ವಿವೇಕಸುಖವರ್ಧಿನೀ**. ಇದನ್ನು ಅವರು ರಚಿಸಿದ್ದು ೧೯೬೭ರಲ್ಲಿಯೇ. ನಂತರ ಇದನ್ನು ಕನ್ನಡಕ್ಕೂ ಅನುವಾದ ಮಾಡಲಾಯಿತು. ಕನ್ನಡ ಅನುವಾದಕ್ಕೆ ಮುನ್ನುಡಿ ಬರೆಯುತ್ತ ಮೈಸೂರು ವಿಶ್ವವಿದ್ಯಾಲಯದ ಡಾ.ಕೆ.ಬಿ.ರಾಮಕೃಷ್ಣ ರಾವ್ ಹೀಗೆ ಬರೆದಿದ್ದಾರೆ :

''ಹೀಗೆ ಮೆಟ್ಟಿಲು ಮೆಟ್ಟಿಲಾಗಿ ಮುಮುಕ್ಷುವಿನ ದೃಷ್ಟಿಯಿಂದ ಯೋಜಿತವಾದ ಉಪನಿಷತ್ತಿನ ಜಾಡನ್ನೇ ಹಿಡಿದು, 'ವಿವೇಕಸುಖವರ್ಧಿನೀ' ರಚಿತವಾಗಿದೆ. ಸ್ವಾಮಿ ಹರ್ಷಾನಂದರ ಸಂಸ್ಕೃತ ವ್ಯಾಖ್ಯಾನ ಸರಳ ಸುಲಭವಾಗಿದ್ದು ಅದರ ಕನ್ನಡ ಅನುವಾದವೂ ಅಷ್ಟೇ ಸುಂದರವಾಗಿದೆ. ಸಾಮಾನ್ಯರಿಗೂ ಅರ್ಥವಾಗುವಂತಹ ಸಂಸ್ಕೃತ ಭಾಷೆ ಮತ್ತು ಸರಳ ಗದ್ಯಶೈಲಿ ಅನುಕರಣೀಯವಾಗಿದೆ. ವ್ಯಾಖ್ಯಾನವೂ ಸ್ವಾಮಿ ವಿವೇಕಾನಂದರ ವಿಚಾರ ಧಾಟಿಯನ್ನು ಅನುಸರಿಸಿದ್ದು ಅವರು ನೀಡಿರುವ ಕರ್ಮಯೋಗ, ಅನುಷ್ಠಾನ ವೇದಾಂತಗಳಿಗೆ ದರ್ಪಣದಂತಿದೆ. ಸ್ವಾಮೀಜಿಯವರ ಶಿಷ್ಯ ಪರಂಪರೆಯ ದಿವ್ಯ ಅನುಭೂತಿಯೊಂದಿಗೆ ತಮ್ಮ ಅನುಭೂತಿಯನ್ನೂ ಸೇರಿಸಿ ಮಥಿಸಿದ ಫಲವಾಗಿ ಬಂದ ನವನೀತದಂತಿದೆ ಈ ವ್ಯಾಖ್ಯಾನ, ಎಂದರೆ ಉತ್ಪ್ರೇಕ್ಷೆಯಲ್ಲ.''

### ೩. ಬ್ರಹ್ಮಸೂತ್ರ ಭಾಷ್ಯಗಳು

ಬ್ರಹ್ಮಸೂತ್ರದಲ್ಲಿ ಬಾದರಾಯಣರು ರಚಿಸಿದ್ದು ಒಟ್ಟು ೫೫೫ ಸೂತ್ರಗಳು. ಇದರ ಮೊದಲ ನಾಲ್ಕು ಸೂತ್ರಗಳು ಮುಖ್ಯವಾದದ್ದು. ಇದಕ್ಕೆ 'ಚತುಸ್ಸೂತ್ರೀ' ಎಂದು ಕರೆಯಲಾಗಿದೆ. ಅಥಾತೋ ಬ್ರಹ್ಮಜಿಜ್ಞಾಸಾ, ಜನ್ಮಾದ್ಯಸ್ಯ ಯತಃ, ಶಾಸ್ತ್ರಯೋನಿತ್ವಾತ್ ಮತ್ತು ತತ್ತು ಸಮನ್ವಯಾತ್, ಇವುಗಳು ಮೊದಲ ನಾಲ್ಕು ಸೂತ್ರಗಳು. ಸಾಧಾರಣವಾಗಿ ಯಾರಿಗೆ ಸಮಯದ ಅಭಾವವಿದ್ದು, ಆದರೂ ಬ್ರಹ್ಮಸೂತ್ರಗಳನ್ನು ಅಧ್ಯಯನ ಮಾಡಬೇಕು ಎಂಬ ಇಚ್ಛೆ ಇದ್ದರೆ 'ಚತುಸ್ಸೂತ್ರಿ'ಗಳನ್ನು ಓದಿದರೆ ಸಾಕು ಎಂದು ಹೇಳುತ್ತಾರೆ. ಈ ಚತುಸ್ಸೂತ್ರಗಳಿಗೆ ಸ್ವಾಮೀಜಿಯವರು 'ಶ್ರೀರಾಮಕೃಷ್ಣ ವೇದಾಂತ ದರ್ಶನಸ್ಯ ಚತುಸ್ಸೂತ್ರೀ' ಎಂಬ ವ್ಯಾಖ್ಯಾನ ಬರೆದಿದ್ದಾರೆ. ಶ್ರೀರಾಮಕೃಷ್ಣ ಉಪದೇಶಾಧಾರಿತ ವ್ಯಾಖ್ಯಾನವೇ ಈ ಭಾಷ್ಯ. ಇದೂ ಇದುವರೆಗೂ ಯಾರೂ ಪ್ರಯತ್ನಿಸದ ಕ್ಷೇತ್ರ.

ಮತ್ತೆ ಬ್ರಹ್ಮಸೂತ್ರವನ್ನು ಓದಲೇಬೇಕು, ಅದೂ ಶ್ರೀಶಂಕರ ಭಗವತ್ಪಾದರ ಭಾಷ್ಯದ ಸಹಾಯದಿಂದ, ಆದರೆ ಹೆಚ್ಚು ನ್ಯಾಯ, ವ್ಯಾಕರಣ ತಿಳಿಯದು ಎಂದರೆ ಅದಕ್ಕೆ ಉಪಾಯವಾಗಿ ಸ್ವಾಮೀಜಿಯವರು **ವಿವೇಕಸೌರಭಮ್** ಎಂಬ ಕೃತಿಯನ್ನು ರಚಿಸಿದ್ದಾರೆ. ಪ್ರತಿಯೊಂದು ಬ್ರಹ್ಮಸೂತ್ರದ ಸೂತ್ರಗಳಿಗೆ ಶ್ರೀಶಂಕರರ ಭಾಷ್ಯದ ಸಾರವನ್ನು ಮಾತ್ರ ಸರಳ ಸಂಸ್ಕೃತ ಭಾಷೆಯಲ್ಲಿ, ಪೂರ್ವಪಕ್ಷ– ಸಿದ್ಧಾಂತ ಈ ವಾದಗಳನ್ನನುಸರಿಸಿ ಕೇವಲ ಸಾರಾಂಶವನ್ನು ಮಾತ್ರ ವ್ಯಕ್ತಪಡಿಸಿದ್ದಾರೆ. ಸರಳವಾಗಿ ವೇದಾಂತವನ್ನು ತಿಳಿಯುವ ಸುಲಭ ಉಪಾಯ ಈ 'ವಿವೇಕಸೌರಭಮ್.'


### ಸ್ತೋತ್ರಗಳು ಮತ್ತು ಹಾಡುಗಳು

ಸ್ವಾಮೀಜಿಯವರು ಸಂಸ್ಕೃತದಲ್ಲಿ ಪುಸ್ತಕಗಳನ್ನು, ಹಲವಾರು ಸ್ತೋತ್ರಗಳನ್ನೂ ರಚಿಸಿದ್ದಾರೆ. ಹಾಗೂ ಕನ್ನಡ ಭಾಷೆಯಲ್ಲೂ ದಿವ್ಯತ್ರಯರ ಮೇಲೆ ಹಾಡುಗಳನ್ನು ರಚಿಸಿದ್ದಾರೆ. ಅವುಗಳು:

- ಶ್ರೀ ರಾಮಕೃಷ್ಣ ಸುಪ್ರಭಾತಮ್
- ಶ್ರೀ ರಾಮಕೃಷ್ಣ ಪ್ರಪತ್ತಿಃ
- ಶ್ರೀ ವಿವೇಕಾನಂದ ಪ್ರಭಾತ–ಪ್ರಾಂಜಲಿಃ
- ಶ್ರೀ ಶಾರದಾದೇವೀ–ಅಷ್ಟೋತ್ತರ ಶತನಾಮಾವಲಿಃ
- ಶ್ರೀ ವಿವೇಕಾನಂದ–ಅಷ್ಟೋತ್ತರ ಶತನಾಮಾವಲಿಃ
- ತ್ರಿಮೂರ್ತಿ ನಮನಮ್
- ಶ್ರೀ ರಾಮಕೃಷ್ಣ ಪ್ರಣತಿಮಾಲಿಕಾ
- ಶ್ರೀ ರಾಮಕೃಷ್ಣ ನಾಮ ಸಂಕೀರ್ತನಮ್
- ಶ್ರೀ ಶಾರದಾ ಸ್ತುತಿಸಪ್ತಕಮ್
- ಶ್ರೀ ಶಾರದಾ ಪ್ರಣತಿಮಾಲಿಕಾ
- ಶ್ರೀ ಶಾರದಾ ಪ್ರಪತ್ತಿಃ
- ಶ್ರೀ ವಿವೇಕಾನಂದ ಪ್ರಣತಿಮಾಲಿಕಾ
- ಶ್ರೀ ರಾಮಕೃಷ್ಣ ಸಂಘಲಾಂಛನ ರಹಸ್ಯಮ್

ನಮ್ಮ ಹೆಚ್ಚಿನ ಎಲ್ಲಾ ರಾಮಕೃಷ್ಣ ಮಠಗಳಲ್ಲಿ ಶ್ರೀರಾಮಕೃಷ್ಣರಿಗೆ ಮುಂಜಾನೆ ಮಂಗಳಾರತಿ ಆದ ನಂತರ ಸ್ವಾಮೀಜಿಯವರು ರಚಿಸಿದ ಶ್ರೀ ರಾಮಕೃಷ್ಣ ಸುಪ್ರಭಾತವನ್ನೇ ಹಾಡುವ ಪದ್ಧತಿ ಇದೆ. ಸ್ವಾಮೀಜಿಯವರು ಸ್ಥೂಲವಾಗಿ, ಭೌತಿಕವಾಗಿ ಇಲ್ಲದಿದ್ದರೂ, ಅವರ ಸ್ತೋತ್ರಾದಿಗಳು ಎಲ್ಲರ ಮನಗಳನ್ನು ಆವರಿಸಿದೆ.

‘ಶ್ರೀಶಾರದಾದೇವೀ ಅಷ್ಟೋತ್ತರ ಶತನಾಮಾವಲಿ’ಯು ಶ್ರೀಶಾರದಾದೇವಿಯವರ ಇಡೀ ಜೀವನದ ಘಟನೆಗಳನ್ನು ಒಳಗೊಂಡಿದೆ. ಯಾವ ರೀತಿ ‘ಶುದ್ಧಬ್ರಹ್ಮ ಪರಾತ್ಪರ ರಾಮ’ ರಾಮಾಯಣವನ್ನು ಒಳಗೊಂಡಿದೆಯೋ ಹಾಗೇ ೧೦೮ ತಾಯಿಯ ನಾಮದೊಂದಿಗೆ ಲೀಲಾಧ್ಯಾನವೂ ಇದರ ಜೊತೆಗೆ ನಡೆಯುತ್ತದೆ. ಇದೇ ಇದರ ವೈಶಿಷ್ಟ್ಯ.




ಹೀಗೆ ಸಾಹಿತ್ಯಕ್ಕೆ ಸ್ವಾಮಿ ಹರ್ಷಾನಂದಜೀ ಮಹಾರಾಜರ ಕೊಡುಗೆ ಅಪಾರ. ‘**ಶ್ರೀ ದುರ್ಗಾ ಸಪ್ತಶತಿ**’ಯನ್ನೂ ಅವರು ಕನ್ನಡಕ್ಕೆ ಅನುವಾದ ಮಾಡಿ ಕನ್ನಡಿಗರಿಗೆ ತಾಯಿ ದುರ್ಗೆಯ ಮಹಿಮೆಯನ್ನು ಅರಿಯಲು ಅನುವು ಮಾಡಿಕೊಟ್ಟಿದ್ದಾರೆ. ತಮ್ಮ ಪುಸ್ತಕಗಳಷ್ಟೇ ಅಲ್ಲ, ಹಲವಾರು ಕನ್ನಡ ಹಾಗೂ ಆಂಗ್ಲ ಲೇಖನಗಳನ್ನು ವಿವೇಕಪ್ರಭ, ವೇದಾಂತ ಕೇಸರಿ, ಪ್ರಬುದ್ಧ ಭಾರತ, Institute of Culture Journal ಇವುಗಳಿಗೆ ಆಗಾಗ ಬರೆದುಕೊಡುತ್ತಿದ್ದರು. ರಾಮಾಯಣ, ಭಾಗವತ, ನಾರದ ಭಕ್ತಿಸೂತ್ರಗಳು, ಪತಂಜಲಿ ಯೋಗ, ವೇದ ಸೂಕ್ತಗಳು, ಭಗವದ್ಗೀತೆ ಹೀಗೆ ಅನೇಕ ಶಾಸ್ತ್ರಗ್ರಂಥಗಳ ಮೇಲೆ ನೂರಾರು ಉಪನ್ಯಾಸಗಳನ್ನು ನೀಡಿದ್ದಾರೆ. ಹೀಗೆ ಬರೆಯುತ್ತಾ ಹೋದರೆ ಪುಟಗಳು ಸಾಕಾಗುವುದಿಲ್ಲ. ಸ್ವಾಮೀಜಿಯವರ ಕೆಲವು ಆಂಗ್ಲ ಲೇಖನಗಳ ಪಟ್ಟಿಯನ್ನೂ ಇಲ್ಲಿ ಕೊಡಲಾಗಿದೆ.

ಇಷ್ಟೆಲ್ಲಾ ಸಾಧ್ಯವಾಗಲು ಅವರ ಜ್ಞಾನದಾಹವೇ ಕಾರಣ. ಆಶ್ರಮಕ್ಕೆ ಸೇರುವ ಮುನ್ನವೇ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ತೀವ್ರ ಉದರದ ಸಮಸ್ಯೆಯಿಂದ ಬಳಲುತ್ತಿದ್ದರು. ಸ್ವಾಮಿ ಯತೀಶ್ವರಾನಂದಜಿಯವರು ಅವರನ್ನು ಕುರಿತು ಹೇಳುತ್ತಿದ್ದರಂತೆ: “Sri Ramakrishna has kidnapped you.” ಬೆಂಗಳೂರು ಆಶ್ರಮದಲ್ಲಿ ನಾನು ಇಪ್ಪತ್ತು ವರ್ಷಗಳ ಕಾಲ ಅವರೊಂದಿಗೆ ಇದ್ದು ನನ್ನ ಜೀವನ ರೂಪಿಸಿಕೊಂಡಿದ್ದೇನೆ. ಅಷ್ಟೂ ವರ್ಷಗಳಲ್ಲಿ ಒಮ್ಮೆಯೂ ನಾನು ಅವರನ್ನು ಕಾಡುಹರಟೆ ಹೊಡೆದು ಸಮಯ ವ್ಯರ್ಥಮಾಡಿದ್ದನ್ನೂ ಕಂಡೇ ಇಲ್ಲ! ದೈಹಿಕವಾಗಿ ಎಷ್ಟೇ ತೊಂದರೆ ಅನಾನುಕೂಲತೆ ಇದ್ದರೂ ಅವರು ತಮ್ಮ ಸಾಧನೆ-ಅಧ್ಯಯನ-ಜಪ ಬಿಟ್ಟದ್ದಿಲ್ಲ. ಗುರುಭಕ್ತಿ ಜ್ಞಾನಪಿಪಾಸೆ ಅವರ ಉಸಿರಾಗಿತ್ತು.

ಇಂಥಹ ಮಹಾತ್ಮರನ್ನು ಈ ಸಂಘಕ್ಕೆ ತಂದ ಶ್ರೀರಾಮಕೃಷ್ಣರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ✽

Since 1995 SILICON CONTROLS An ISO 9001-2015 Co

# Silicon Controls (India) Pvt. Ltd

UPS
On Line UPS
Solar domestic UPS
Solar on Grid/off Grid
Servo Stabilizers
Tubular Batteries

Mysore's No 1 UPS Company

+ 91 9880055095
0821-2340253
Siliconcontrols.in



# 515/A, 15th Main, 6th Cross, Saraswathipuram, Mysore - 570009

# Silicon Infra Realities Pvt. Ltd



Make Your dream Home
Come to reality with
Silicon Infra Realities

SILICON INFRA
SITES FOR LIVING

+ 91 9845122288 | 0821-2540560 | siliconinfra.com

# 536, 15th Main, 6th Cross, Saraswathipuram, Mysore - 570009